ಅಸಲು ದಾವೆ ಸಂಖ್ಯೆ -54/2022
ಪಿ.ಡಬ್ಲ್ಯು - 03
ದಿನಾಂಕಃ 21-11-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ 3 ನೇ ಪ್ರತಿವಾದಿ ಪರ ಶ್ರೀ. ಎನ್ ಎಸ್ ಪಿ ವಕೀಲರಿಂದ**

ನಿಮ್ಮ ಮುಖ್ಯವಿಚಾರಣೆ ಪ್ರಮಾಣ ಪತ್ರಕ್ಕೆ ಯಾರು ಮಾಹಿತಿ ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ನೀವು ಏನು ಕೆಲಸ ಮಾಡುತ್ತೀರಿ ಎಂದರೆ ವ್ಯಾಪಾರ ಮಾಡುತ್ತೇನೆ. ನೀವು ಮುಂಡರಿಗಿಯಲ್ಲಿ ಇರುತ್ತೀರಿ ಎಂದರೆ ನಾವು ಯಲವಿಗಿಯಲ್ಲಿ ಇರುತ್ತೇವೆ. 2 ವರ್ಷದಿಂದ ಗದಗನ ಬೇಟಗೇರಿ ಗ್ರಾಮದಲ್ಲಿ ಇದ್ದೇವೆ. ಇಂದು ಬೇಟಗೇರಿಯಿಂದ ಬಂದಿದ್ದೀರಿ ಎಂದರೆ ಸರಿ. ವಾದಿ ನಿಮ್ಮ ಗೆಳೆಯ ಎಂದರೆ ಅಲ್ಲ ಅವರ ತಮ್ಮ ವಿಜಯ ನನ್ನ ಸಹಪಾಠಿ ಆಗಿದ್ದನು. ವಾದಿ ಮತ್ತು ಅವರ ಸಹೋದರ ವಿಜಯ ನಿಮಗೆ ಸಾಕ್ಷಿ ಹೇಳಲು ಕೇಳಿದಕ್ಕೆ ನೀವು ಇಂದು ಬಂದಿದ್ದೀರಿ ಎಂದರೆ ಸರಿಯಲ್ಲ. ಅವರು ಏನು ನಮಗೆ ಕರೆದಿರುವುದಿಲ್ಲ. ನಿಮಗೆ ನ್ಯಾಯಾಲಯದಿಂದ ಸಾಕ್ಷಿ ಸಮನ್ಸ ಏನಾದರೂ ಬಂದಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈದಿನ ಮುದ್ದತ್ತ ಇದೆ ಎಂದು ಹೇಗೆ ಗೊತ್ತಾಯಿತು ಎಂದರೆ ಈ ಹಿಂದೆ ಬಂದಿದ್ದರಿಂದ ಗೊತ್ತಿತ್ತು. ಈ ಹಿಂದೆ ಯಾರು ಕರೆದುಕೊಂಡು ಬಂದಿದ್ದರು ಎಂದರೆ ವಕೀಲರು ಹೇಳಿದ್ದರು.

ವಾದಿಗೆ ದಾವಾ ಆಸ್ತಿ ಹೇಗೆ ಬಂದಿತು ಎಂದರೆ ಅವರು ಗೋವಿಂದಆಚಾರ್ಯಾ ರಾಯಚೂರ ರವರ ಕುಟುಂಬದಿಂದ ಖರಿದಿ ಹಿಡಿದಿರುತ್ತಾರೆ. ಖರೀದಿ ವ್ಯವಹಾರದಲ್ಲಿ ನಿವೇನಾದರೂ ಇದ್ದರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ವಿಷಯ ಗೊತ್ತಾಯಿತು. ಯಾವಾಗ ನಿಮಗೆ ಗೊತ್ತಾಯಿತು ಎಂದರೆ 2010. ಖರೀದಿ ಪತ್ರದಲ್ಲಿ ಎಷ್ಟು ಅಳತೆ ಬರೆಸಿದ್ದಾರೆ ಎಂದು ನಿಮಗೆ ಹೇಳಲು ಆಗುತ್ತದೆಯಾ ಎಂದರೆ ಪೂರ್ವ ಪಶ್ಚಿಮ – 22 ಪೂಟ, ಉತ್ತರ ದಕ್ಷಿಣ 142 ಪೂಟ ಇರುತ್ತದೆ. ನಿವೇನಾದರೂ ದಾವಾ ಆಸ್ತಿಯ ಅಳತೆ ಮಾಡಿದ್ದೀರಾ ಎಂದರೆ ಪಿ ಡಿ ಓ ರವರು ಈ ಸ್ವತ್ತು ಮಾಡುವ ಮುನ್ನ ಬಂದು ಅಳತೆ ಮಾಡಿರುತ್ತಾರೆ ಆಗ ನಾನು ಸಹ ಇದ್ದೇನು. ಇನ್ನು ಯಾರು ಯಾರು ಇದ್ದರು ಎಂದರೆ ವಾದಿ ಇದ್ದರು. 2 ನೇ ಬಾರಿ ಅಳತೆ ಮಾಡುವಾಗ ಮಂಜುನಾಥ( ಪಿ ಡಬ್ಲೂ - 2) ರವರು ಇದ್ದರು.ಅಳತೆ ಮಾಡಲು ಯಾವಾಗ ಹೋಗಿದ್ದೀರಿ ಎಂದರೆ ನಾಲ್ಕು ವರ್ಷದ ಹಿಂದೆ ಹೋಗಿದ್ದೇನು. ದಾವಾ ಆಸ್ತಿಯನ್ನು ಅಳತೆಯನ್ನು ಮಾಡಲು ನೀವು ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯ ಉತ್ತರ- ದಕ್ಷಿಣ 132 ಪೂಟ ಇದೆ ಎಂದರೆ ಸರಿಯಲ್ಲ. ಏನು ಪರಿಹಾರ ಕೇಳಿ ದಾವೆ ಹೂಡಿದ್ದಾರೆ ಎಂದರೆ ದಾರಿ ಸಲುವಾಗಿ ಉತ್ತರ ದಕ್ಷಿಣ 140 ಪೂಟ ಪೂರ್ವ ಪಶ್ಚಿಮ 22 ಪೂಟ ಇದೆ ಎಂದು ಹೂಡಿದ್ದಾರೆ. ಉತ್ತರಕ್ಕೆ ದಾರಿ ಇದೆ ಎಂದು ನುಡಿದಿದ್ದು ಎಷ್ಟು ಅಳತೆ ಇದೆ ಎಂದರೆ ಗೊತ್ತಿಲ್ಲ. ಆದರೆ ದಾರಿಇರುತ್ತದೆ. ದಾರಿ ಬಗ್ಗೆ ಪಂಚಾಯತಿಯಲ್ಲಿ ದಾಖಲೆಗಳು ಇರುತ್ತವೆ ಎಂದರೆ ಸರಿ. ದಾರಿ ಇದ್ದರೆ ಪಂಚಾಯತಿಯವರು ಅದನ್ನು ಅಭಿವೃದ್ಧಿ ಮಾಡುತ್ತಾರೆ ಇಲ್ಲದಿದ್ದರೆ ಮಾಡುವುದಿಲ್ಲ ಎಂದರೆ ಸರಿ. ಉತ್ತರಕ್ಕೆ ಇರುವ ದಾರಿಯು ಅಭಿವೃದ್ಧಿ ಆಗಿರುವುದಿಲ್ಲ ಎಂದರೆ ಸರಿ. ದಾರಿ ಇಲ್ಲದೆ ಇರುವುದರಿಂದ ಪಂಚಾಯತಿಯವರು ಅವರು ಅದನ್ನು ಅಭಿವೃದ್ಧಿ ಮಾಡಿರುವುದಿಲ್ಲ ಎಂದರೆ ದಾರಿ ಇತ್ತು ಈ ಜಾಲಿ ಗಿಡ ಬೆಳೆದಿರುತ್ತದೆ. ಜಾಲಿ ಗಿಡ ಬೆಳೆದು ಎಷ್ಟು ವರ್ಷ ಆಯಿತು ಎಂದರೆ ಮೊದಲು ಜಾಲಿ ಬೆಳೆದಿತ್ತು ಈಗ 4 ವರ್ಷದಿಂದ ಎಲ್ಲವನ್ನು ಸ್ವಚ್ಛ ಮಾಡಿರುತ್ತಾರೆ. 3 ನೇ ಪ್ರತಿವಾದಿಯು ಸ್ವಚ್ಛ ಮಾಡಿಸಿರುತ್ತಾರೆ. 3 ನೇ ಪ್ರತಿವಾದಿಯು ಅದನ್ನು ಸ್ವಚ್ಛ ಮಾಡಿಸಿ, ಅವರ ಆಸ್ತಿಯ ಉತ್ತರಕ್ಕೆ ಆಸ್ತಿ ನಂ. 86 ಇದೆ ಎಂದರೆ ರಸ್ತೆಯ ನಂತರ 86 ನೇ ಆಸ್ತಿ ಇರುತ್ತದೆ.

ಆಸ್ತಿ ನಂ. 86 ರ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಆಗುವುದಿಲ್ಲ. ಆಸ್ತಿ ನಂ. 86 ನ್ನು ಫಕ್ಕೀರಪ್ಪ ಯಲ್ಲಪ್ಪ ಕುರಬರ ರವರಿಗೆ ರಾಯಚೂರ ರವರು 2020 ರಲ್ಲಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಮಾರಾಟ ಮಾಡಿದ್ದರ ಪ್ರಕಾರ ಫಕ್ಕೀರಪ್ಪ ರವರ ಹೆಸರು ಪಂಚಾಯತಿಯಲ್ಲಿ ದಾಖಲು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಮಾರಾಟ ಮಾಡುವ ಪೂರ್ವದಲ್ಲಿ ವಾದಿಯು ತಕರಾರನ್ನು ಸಲ್ಲಿಸಿರುತ್ತಾರೆ. ಖರೀದಿ ಹಿಡಿದಾಗಿನಿಂದ ಫಕ್ಕೀರಪ್ಪ ಕುರುಬರ ರವರ ವಹಿವಾಟಿನಲ್ಲಿ ಇದೆ ಎಂದರೆ ಸರಿ. ಆಸ್ತಿ ನಂ. 82 ಮತ್ತು 83 ಒಂದಕ್ಕೊಂದು ಹೊಂದಿಕೊಂಡು ಇವೆ ಎಂದರೆ ಸರಿ. ಅವುಗಳ ಉತ್ತರಕ್ಕೆ ರಸ್ತೆ ಇರುತ್ತದೆ. ಆಸ್ತಿ ನಂ. 86 ಖರೀದಿ ಆದಾಗಿನಿಂದ ಫಕ್ಕೀರಪ್ಪ ರವರೇ ಕಬ್ಜೆಯಲ್ಲಿ ಇದ್ದಾರೆ ಎಂದರ ಅಲ್ಲಿ ಯಾರು ಇರುವುದಿಲ್ಲ ಖುಲ್ಲಾ ಜಾಗೆ ಇದೆ. ಮುಂದುವರೆದು ರಸ್ತೆಯು ಇದೆ. ಫಕ್ಕೀರಪ್ಪ ರವರು ಖರೀದಿ ಹಿಡಿದ ಆಸ್ತಿಯ ದಕ್ಷಿಣಕ್ಕೆ 15 ಪೂಟ ರಸ್ತೆ ಇದೆ ಎಂದರೆ ಅದನ್ನು ಈಗ ಮಾಡಿರುತ್ತಾರೆ ಆದರೆ ನೈಜವಾಗಿ ಯಾವುದೇ ರಸ್ತೆ ಇರುವುದಿಲ್ಲ. ಸದರಿ 15 ಪೂಟ ರಸ್ತೆಯ ಮುಖಾಂತರವೇ ವಾದಿಯರು ಪೂರ್ವಕ್ಕೆ ಇರುವ ರಸ್ತೆಗೆ ವಹಿವಾಟು ಮಾಡುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಸಲ್ಲಿಸಿರುವ ಕಚ್ಚಾ ನಕ್ಷೆಯ ಪೂರ್ವಕ್ಕೆ ರಸ್ತೆ ಇದೆಯೋ ಇಲ್ಲವೋ ಎಂದರೆ ಸಾಕ್ಷಿಯು ಪರಿಶೀಲಿಸಿ ಇದೆ ಎಂದು ನುಡಿಯುತ್ತಾರೆ. ವಾದಿಯರು ಸದರಿ 15

ಪೂಟ ರಸ್ತೆಯ ಮುಖಾಂತರವೇ ಪೂರ್ವದ ರಸ್ತೆಗೆ ಕೂಡುತ್ತಿದ್ದರು ಇಲ್ಲ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆಸ್ತಿ ನಂ. 86 ರ ಒಂದು ಭಾಗವನ್ನು ಫಕ್ಕೀರಪ್ಪ ರವರಿಗೆ ಮಾರಾಟ ಮಾಡಿದ್ದು ಉಳಿದ ಭಾಗವನ್ನು 3 ನೇ ಪ್ರತಿವಾದಿಯೇ ಉಳಿಸಿಕೊಂಡಿದ್ದಾರೆ ಎಂದರೆ ದಾರಿಯನ್ನು ಒಳಗೊಂಡು ಉತಾರವನ್ನು ಹುಟ್ಟಿಸಿರುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯ 3 ನೇ ಪ್ಯಾರಾದಲ್ಲಿ ಹೇಳಿದ ಹಾಗೆ ಬರೆಸಿದ್ದೀರಾ ಎಂದರೆ ಪಿ ಡಿ ಓ ರವರು ಉತಾರವನ್ನು ಹುಟ್ಟಿಸಿರುತ್ತಾರೆ. ಅತಿಕ್ರಮಣ ಮಾಡಿಲ್ಲಾ ಎಂದರೆ ಸರಿ. ದಾವಾ ಆಸ್ತಿ ಖರೀದಿ ಆಗುವ ಮೊದಲು ಎಷ್ಟು ಜನರ ಹೆಸನರಿಲ್ಲಿ ಇತ್ತು ಎಂದರೆ ಗೋವಿಂದಆಚಾರ್ಯ ರವರ ಅಣ್ಣ ತಮ್ಮಂದಿರ ಹೆಸರಿಲ್ಲಿ ಇತ್ತು. ನೀವು ಖರೀದಿ ಪತ್ರವನ್ನು ನೋಡಿದ್ದೀರಾ ಎಂದರೆ ನೋಡಿದ್ದೇನೆ. 5 ಜನ ಕೂಡಿ ಮಾರಾಟ ಮಾಡಿದರಾ ಎಂದರೆ ಮೋಕ್ತಿಯಾರ ನಾಮ ಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ. ಯಾರು ಯಾರಿಗೆ ಮೊಕ್ತಿಯಾರ ನಾಮಪತ್ರವನ್ನು ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಖರೀದಿ ಪತ್ರಕ್ಕೆ ಯಾರು ಸಹಿ ಮಾಡಿದ್ದಾರೆ ಎಂದರೆ ರಾಯಚೂರ ಕುಟುಂಬದವರು ಎಲ್ಲರೂ ಮಾಡಿದ್ದಾರೆ. ಉತ್ತರಕ್ಕೆ ಯಾವುದೇ ರಸ್ತೆ ಇಲ್ಲದೆ ಇದ್ದರೂ ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ವಾದಿಯ ಆಸ್ತಿಯು ಉತ್ತರ ದಕ್ಷಿಣ 132 ಪೂಟ ಇದ್ದರು ಸಹ 140 ಇದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸವಣೂರು.